# ಕಲಿಕೆಗಾಗಿ ಹೊಸಹಾದಿ ತೆರೆಯೋಣ

# ಮುನ್ನಡೆಯುವ

## ಕನ್ನಡ

## KANNADA

ತರಗತಿ - 4

State Council of Educational and Research and Training (SCERT), Kerala.

# ಕಲಿಕೆಗಾಗಿ ಹೊಸಹಾದಿ ತೆರೆಯೋಣ

## ಮುನ್ನಡೆಯುವ

### ಮುನ್ನುಡಿ

ಮಾರಕವಾದ ಕೋವಿಡ್ ಮಹಾಮಾರಿಯ ಅಲೆಯಿಂದ 2019 ರಿಂದ 2021 ರ ವರೆಗೆ ವಿದ್ಯಾರ್ಥಿಗಳಿಗೆ ಪೂರ್ಣ ರೂಪದಲ್ಲಿ ನೇರವಾದ ಕಲಿಕಾನುಭವಗಳು ಲಭಿಸದಿರುವುದರಿಂದ ಅವರ ಕಲಿಕಾ ಗುಣಮಟ್ಟದಲ್ಲಿ ಹಿಂಜರಿಕೆ ಉಂಟಾಗಿರುವುದಾಗಿ 2022 ರ ಕಾಲುವಾರ್ಷಿಕ ಮೌಲ್ಯಮಾಪನದಿಂದ ಲಭಿಸಿದ ಫಲಿತಾಂಶಗಳ ವಿಶ್ಲೇಷಣೆ ಮತ್ತು ಅಧ್ಯಾಪಕರ ಅನುಭವಗಳಿಂದ ವೇದ್ಯವಾಗಿರುತ್ತದೆ. ಮೊದಲಿನ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಲಭಿಸಬೇಕಾಗಿದ್ದ ಕೆಲವು ಆಶಯಗಳನ್ನು ಆರ್ಜಿಸುವುದಕ್ಕೂ ಪ್ರಸ್ತುತ ತರಗತಿಯ ಕಲಿಕೆಯನ್ನು ಮತ್ತಷ್ಟು ಉತ್ತಮಗೊಳಿಸುವುದಕ್ಕೂ ಸಹಕಾರಿಯಾಗುವ ಒಂದು ಕಲಿಕಾ ಸಹಾಯಿಯನ್ನು ತಯಾರಿಸಿ ಕೊಡಲಾಗಿದೆ. ಇದರಲ್ಲಿ ವಿದ್ಯಾರ್ಥಿಗೆ ನಷ್ಟವಾದ ಕಲಿಕಾನುಭವಗಳ ಕುರಿತಾದ ವಿವರಗಳನ್ನು ಮತ್ತು ಅದನ್ನು ಪರಿಹರಿಸುವ ಮಾರ್ಗೋಪಾಯಗಳನ್ನು ಸೂಚಿಸಲಾಗಿದೆ. ವಿದ್ಯಾರ್ಥಿಗಳು ಈ ಕಲಿಕಾ ಸಹಾಯಿಯ ನೆರವಿನಿಂದ ಸ್ವಯಂ ಕಲಿಕೆ ಮತ್ತು ಅಧ್ಯಾಪಕರ ಸಹಾಯದಿಂದ ನಷ್ಟವಾದ ಕಲಿಕಾನುಭವಗಳನ್ನು ಪುನಃ ಆರ್ಜಿಸಿಕೊಂಡು ಆತ್ಮವಿಶ್ವಾಸದಿಂದ ಕಲಿಕೆಯಲ್ಲಿ ಮುನ್ನಡೆಯುವಂತಾಗಲಿ ಎನ್ನುವ ಶುಭ ಹಾರೈಕೆ.

**ನಿರ್ದೇಶಕರು,**

**SCERT, ಕೇರಳ**

**ಅಧ್ಯಾಪಕ ಬಂಧುಗಳೇ / ವಿದ್ಯಾರ್ಥಿಗಳೇ,**

ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ತೊಂದರೆಗಳನ್ನು ಕಂಡುಹಿಡಿದು ಪರಿಹಾರ ಮಾಡಲು ಎಸ್.ಸಿ.ಇ.ಆರ್.ಟಿ ಕೇರಳವು Bridge Material ತಯಾರು ಮಾಡಲು ತೀರ್ಮಾನಿಸಿದೆ. ಇದರ ಅಂಗವಾಗಿ 3 ಮತ್ತು 4 ನೇ ತರಗತಿಯ ಕಾಲುವಾರ್ಷಿಕ ಮೌಲ್ಯಮಾಪನದ ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಿ, ಪ್ರತಿಯೊಂದು ಚಟುವಟಿಕೆಗಳನ್ನು ವಿಶ್ಲೇಷಿಸಿ, ಮಕ್ಕಳು ಎದುರಿಸುತ್ತಿರುವ ಯಥಾರ್ಥ ಸಮಸ್ಯೆಗಳನ್ನು ಕಂಡುಹಿಡಿಯಲು ತೀರ್ಮಾನಿಸಲಾಯಿತು. ಅದರ ಪರಿಹಾರ ಬೋಧನೆಗಾಗಿ Bridge Material ಅನ್ನು ತಯಾರಿಸಲಾಗಿದೆ.

ಕೋವಿಡ್ ಕಾಲಘಟ್ಟ ಎಂಬುದು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಹಲವು ರೀತಿಯಲ್ಲಿ ಪ್ರಭಾವ ಬೀರಿದೆ. ವಿದ್ಯಾರ್ಥಿಗಳ ಬೌದ್ಧಿಕ, ಶಾರೀರಿಕ, ಮಾನಸಿಕ ಬದಲಾವಣೆಗಳು ಶೈಕ್ಷಣಿಕವಾದ ಹಿನ್ನಡೆಗೂ ಕಾರಣವಾಗಿದೆ. ಶಿಕ್ಷಣ ಇಲಾಖೆಯು, ಮಕ್ಕಳಿಗೆ ಶಾಲಾದಿನಗಳು ಮತ್ತು ಪಾಠಪ್ರವಚನಗಳು ನಷ್ಟವಾಗದಂತೆ ಆನ್‌ಲೈನ್ ತರಗತಿಗಳ ವ್ಯವಸ್ಥೆ ಮಾಡಿತು. ಈ ತರಗತಿಗಳು ಮಕ್ಕಳ ಅಧ್ಯಯನ ಸಮಯವನ್ನು ಭರ್ತಿ ಮಾಡಿದರೂ, ಅವರಲ್ಲಿ ವಿವಿಧ ರೀತಿಯ ಭಾಷಾ ಸಾಮರ್ಥ್ಯಗಳ ಬೆಳವಣಿಗೆಯಲ್ಲಿ ವಿವಿಧ ರೀತಿಯಲ್ಲಿ ಪರಿಣಾಮ ಬೀರಿತು. ಭಾಷಾ ಕಲಿಕೆಯ ದೋಷಗಳನ್ನು ಪರಿಹರಿಸಲು ಹ್ರಸ್ವಕಾಲದ ಯೋಜನೆಯ ಅಗತ್ಯವಿದೆ.

ಮೌಲ್ಯಮಾಪನ ಎಂಬುದು ವಿದ್ಯಾರ್ಥಿಗಳ ಸಮಗ್ರ ಮೌಲ್ಯನಿರ್ಣಯವಲ್ಲದಿದ್ದರೂ ತರಗತಿಯ ಸಾಮಾನ್ಯ ಸಮಸ್ಯೆಗಳನ್ನು ನಿರ್ಧರಿಸಲು ಮತ್ತು ತನ್ನ ಬೋಧನಾ ತಂತ್ರದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಲು ಶಿಕ್ಷಕರಿಗೆ ಸಹಾಯ ಮಾಡುತ್ತದೆ. ಇದಕ್ಕಾಗಿ ಮೂರು ಮತ್ತು ನಾಲ್ಕನೇ ತರಗತಿಯ ವಿವಿಧ ಶಾಲೆಗಳ ನೂರರಷ್ಟು ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಿ, ಎಲ್ಲಾ ಪ್ರಶ್ನೆಗಳ ಕೂಲಂಕಷ ವಿಶ್ಲೇಷಣೆಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಭಾಷಾಪರ, ವ್ಯಾಕರಣಪರ, ವ್ಯವಹಾರರೂಪ ಮತ್ತು ಆಸ್ವಾದನಾ ಪರವಾದ ವಿಭಾಗಗಳಲ್ಲಿ ಅವರಲ್ಲಿರುವ ಕೊರತೆಗಳನ್ನು ಗುರುತಿಸಲಾಯಿತು. ಭಾಷಾಪರವಾದ ಪದ, ವಾಕ್ಯ ಬರವಣಿಗೆಯ ಕ್ರಮ, ಅಕ್ಷರತಪ್ಪುಗಳು, ವ್ಯಾಕರಣಪರವಾದ ಪದ - ವಾಕ್ಯರಚನಾ ಕ್ರಮ, ವ್ಯಾಕರಣ ತಪ್ಪುಗಳು, ವ್ಯವಹಾರರೂಪಗಳಲ್ಲಿ ವಿವರಣೆ, ಸಂಭಾಷಣೆ, ಪತ್ರ ಬರವಣಿಗೆ, ಮನವಿ ಪತ್ರ, ವರ್ಣನೆ ಮೊದಲಾದವುಗಳ ಬಗ್ಗೆ ತಿಳುವಳಿಕೆಯ ಕೊರತೆ, ಆಸ್ವಾದನಾಪರವಾದ ವರ್ಣನೆ ಮೊದಲಾದ ಸಮಸ್ಯೆಗಳನ್ನು ಗುರುತಿಸಲಾಯಿತು.

ಕಲಿಕಾ ಸೇತುವಿನಲ್ಲಿರುವ ಚಟುವಟಿಕೆಗಳನ್ನು ಮಾದರಿಯಾಗಿ ತರಗತಿಗಳಲ್ಲಿ ಫಲಪ್ರದವಾಗಿ ಅಳವಡಿಸಬೇಕಾಗಿದೆ. ಜೊತೆಗೆ ಇದೇ ರೀತಿಯಲ್ಲಿರುವ ಚಟುವಟಿಕೆಗಳನ್ನು ಅಧ್ಯಾಪಕರು ಸ್ವತಃ ತಯಾರಿಸಿ ನಡೆಸುವ ಮೂಲಕ ಮಕ್ಕಳ ಭಾಷಾಸಾಮರ್ಥ್ಯ ವಿಕಾಸಕ್ಕೆ ಪ್ರಯತ್ನಿಸಬೇಕಾಗಿದೆ.

**ಕಲಿಕಾ ಚಟುವಟಿಕೆಗಳು**

**4 ನೇ ತರಗತಿ**

---

## ಉದ್ದೇಶಗಳು

- ಅಕ್ಷರ ತಪ್ಪಿಲ್ಲದೆ ಬರೆಯುವುದು.
- ವಾಚನಾ ಸಾಮಗ್ರಿಯನ್ನು ಉಚ್ಚಾರ ಸ್ಫುಟತೆಯೊಂದಿಗೆ ಆಶಯಗ್ರಹಣ ಮಾಡಿ ಓದುವುದು.
- ಪದಗಳ ನಿರ್ಧಿಷ್ಟ ಉಚ್ಚಾರ ತಿಳಿಯುವುದು.
- ಸರಳ ವಾಕ್ಯಗಳಲ್ಲಿ ಆಶಯ ಕೆಡದಂತೆ ಬರೆಯುವುದು.
- ಸರಳ ಸಂಭಾಷಣೆ ಆಲಿಸುವುದು. / ಓದುವುದು. / ರಚಿಸುವುದು.
- ಕಾರ್ಟೂನ್ ಪಕ್ಷಿಗಳ ಸರಳ ಸಂಭಾಷಣೆಯನ್ನು ವಿವಿಧ ಮಾಧ್ಯಮಗಳ ಮೂಲಕ ವೀಕ್ಷಿಸುವುದು. ಸ್ವಂತವಾಗಿ ಬರೆಯುವುದು.
- ಸರಳ ಭಾಷೆಯಿಂದೊಡಗೂಡಿದ ಸಂದರ್ಶನ ಪ್ರಶ್ನಾವಳಿಗಳನ್ನು ತಯಾರಿಸುವುದು.

**ಅಧ್ಯಾಪಕರೊಡನೆ....**

◆ ಕಾಲುವಾರ್ಷಿಕ ಮೌಲ್ಯಮಾಪನದ ಅನಂತರ ನಡೆಯುವ ಪಾಠಭಾಗಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ತಯಾರಿಸಲಾಗಿದೆ.

◆ ಹೆಚ್ಚು ಮಕ್ಕಳಲ್ಲಿ ಕಂಡುಬಂದ ಸಮಸ್ಯೆಯ ಪರಿಹಾರಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ನೀಡಲಾಗಿದೆ.

◆ ಆಯಾ ಪಾಠಭಾಗಕ್ಕೆ ಹೊಂದಿಕೊಂಡು ಚಟುವಟಿಕೆಯನ್ನು ಮಕ್ಕಳಿಂದ ಮಾಡಿಸಬೇಕು.

◆ ಪಾಠದ ಆರಂಭದಲ್ಲಿ - ಮಧ್ಯದಲ್ಲಿ - ಕೊನೆಯಲ್ಲಿ ಹೀಗೆ ಸೂಕ್ತವಾದ ಸಂದರ್ಭಗಳಲ್ಲಿ ಉಪಯೋಗಿಸಬೇಕು.

◆ ಚಟುವಟಿಕೆ ನಡೆಯುವ ಸಮಯದಲ್ಲಿ ಮಕ್ಕಳಿಗೆ ಸರಿಯಾದ ಸೂಚನೆ/ಮಾಹಿತಿ ನೀಡಬೇಕು.

◆ ಈ ಚಟುವಟಿಕೆಗಳಿಗೆ ಪೂರಕವಾಗಿ ಕೆಲವೊಂದು ಚಟುವಟಿಕೆಗಳನ್ನು ಅಧ್ಯಾಪಕರು ಸ್ವತಃ ತಯಾರಿಸಿ ನೀಡಬಹುದು.

◆ ಆರಂಭದಲ್ಲಿ ಓದಲು, ಬರೆಯಲು ಸಮಸ್ಯೆಗಳಿರುವ ಮಕ್ಕಳಿಗೆ ಸಣ್ಣ ಮಟ್ಟಿನ ಸಹಾಯ ನೀಡಬೇಕು.

**ಕನ್ನಡ ಭಾಷಾ ಕಲಿಕಾ ಚಟುವಟಿಕೆಗಳು**

**ತರಗತಿ 4**

**ಚಟುವಟಿಕೆ 1 - ಸಮಾನಾರ್ಥ ಪದಗಳು**

ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳ ಸಮಾನಾರ್ಥ ಪದಗಳನ್ನು ಆವರಣದಲ್ಲಿ ಕೊಟ್ಟಿರುವವುಗಳಿಂದ ಗುರುತಿಸಿ ಬರೆಯಿರಿ.

1. **ಗುಡಿಸುವವನು** ನಗರದ ರಸ್ತೆಗಳಲ್ಲಿರುವ **ತ್ಯಾಜ್ಯ**ಗಳನ್ನು ಗುಡಿಸಿ ಶುಚಿಗೊಳಿಸುತ್ತಾನೆ.
2. ಸುಮೇಶನು ತನ್ನ ತಂಗಿಯ ಮದುವೆಯ **ಆಮಂತ್ರಣ** ಪತ್ರಿಕೆಯನ್ನು ಹಂಚತೊಡಗಿದನು.
3. ನಾವು ನಮ್ಮ ತರಗತಿ **ಕೋಣೆ**ಯನ್ನು ಆಕರ್ಷಕವಾಗಿ ಅಲಂಕರಿಸಬೇಕು.
4. ವಾರ್ತಾಪತ್ರಿಕೆಯನ್ನು ಮಾರುವವನು **ಬೆಳ್ಳಂಬೆಳಗ್ಗೆ** ಎಲ್ಲರ ಮನೆಗಳಿಗೆ ಪತ್ರಿಕೆಗಳನ್ನು ಮಾರುತ್ತಾನೆ.
5. ಸಂಜೆಯ ಸಮಯದಲ್ಲಿ ಸೂರ್ಯ ಮುಳುಗುವಾಗ ಆಕಾಶದಲ್ಲಿ ಸುಂದರವಾದ ದೃಶ್ಯ **ಉಂಟಾಗುತ್ತದೆ.**

(ಕಸ, ಆಹ್ವಾನ, ಕೊಠಡಿ, ಮುಂಜಾನೆ, ಸೃಷ್ಟಿ, ಜಾಡಮಾಲಿ)

**ಚಟುವಟಿಕೆ 2 - ವಿವರಣೆ ತಯಾರಿ - ಸ್ವಚ್ಛತೆ**

ಉದ್ದೇಶ - ಸ್ವಚ್ಛತೆಯ ಬಗ್ಗೆ ವಿವರಣೆ ಬರೆಯಲು ಅಗತ್ಯವಾದ ಆಶಯ ರೂಪೀಕರಿಸುವುದು.

1. ಸರಳ ಚರ್ಚೆ

- ಕಸ ಗುಡಿಸಿದ ಗಾಂಧೀಜಿ ಪಾಠಭಾಗದ ಕುರಿತು ವಿದ್ಯಾರ್ಥಿಗಳ ವೈಯಕ್ತಿಕ ಅಭಿಪ್ರಾಯವನ್ನು ಬಾಯ್ದೆರೆಯಾಗಿ ಮಂಡಿಸಲು ಕೆಲವರಿಗೆ ಅವಕಾಶ.
- ಈ ಪಾಠದಲ್ಲಿ ಗಾಂಧೀಜಿಯವರು ಮಾಡಿದ ಯಾವ ಕೆಲಸವನ್ನು ಗುರುತಿಸಿದ್ದಾರೆ?
- ನಾವು ದಿನನಿತ್ಯದ ಬದುಕಿನಲ್ಲಿ ಶುಚಿತ್ವಕ್ಕೆ ಸಂಬಂಧಿಸಿ ಯಾವೆಲ್ಲ ಕೆಲಸಗಳನ್ನು ಮಾಡುತ್ತೇವೆ?
- ನೀವು ಪ್ರತಿದಿನ ಮಾಡುವ ಯಾವುದಾದರೊಂದು ಶುಚಿತ್ವಕ್ಕೆ ಸಂಬಂಧಿಸಿದ ಕೆಲಸವನ್ನು ವಾಕ್ಯ ಮಾಡಿ ಬರೆಯಿರಿ.

- ಪ್ರತಿಯೊಬ್ಬರಿಂದಲೂ ಮಂಡಿಸಲು ಅವಕಾಶ.
- ಅಧ್ಯಾಪಕರಿಂದ ಪದಸೂರ್ಯದ ರಚನೆ.

(ಶುಚಿತ್ವಕ್ಕೆ ಸಂಬಂಧಿಸಿ ವಿವಿಧ ಕಾರ್ಯಗಳನ್ನು ತಿಳಿಯಲು ಪದಸೂರ್ಯವನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಾ ಅವರಿಂದಲೇ ಉತ್ತರಗಳನ್ನು ಹೇಳಿಸಿ ಕರಿಹಲಗೆಯಲ್ಲಿ ಬರೆಯುವುದು.)

ವೈಯಕ್ತಿಕ ಶುಚಿತ್ವ, ಮನೆ ಮತ್ತು ಪರಿಸರ ಶುಚಿತ್ವ, ಶಾಲಾ ಶುಚಿತ್ವ ಹೀಗೆ ಎಲ್ಲಾ ವಿಧಗಳು ದಾಖಲಾಗಬೇಕು. ಅನಂತರ ಕೆಲವು ವಾಕ್ಯಗಳನ್ನು ಕರಿಹಲಗೆಯಲ್ಲೋ ಚಾರ್ಟು ಪೇಪರಿನಲ್ಲೋ ಬರೆದು ಪ್ರದರ್ಶಿಸುವುದು. ಅವುಗಳಲ್ಲಿರುವ ವಾಕ್ಯಗಳನ್ನು ವಿದ್ಯಾರ್ಥಿಗಳು ವೈಯಕ್ತಿಕವಾಗಿ ಓದುವುದು. ಸರಿಯಾದ ಪದಗಳನ್ನು ಆರಿಸಿ ಬರೆಯುವುದು. ಬಳಿಕ ಮೂರು ಅಥವಾ ನಾಲ್ಕು ಮಂದಿಯ ಗುಂಪುಗಳಲ್ಲಿ ಪರಸ್ಪರ ಮೌಲ್ಯಮಾಪನ ಮಾಡಿ, ಅನಂತರದಲ್ಲಿ ತರಗತಿ ಮಟ್ಟದಲ್ಲಿ ಸರಿಪಡಿಸಿ ಬರೆಯುವುದು.

1. ಪ್ರತಿದಿನ ............. ಮತ್ತು ಸಂಜೆ ಎರಡು ಬಾರಿ ಸ್ನಾನ ಮಾಡಬೇಕು. (ಬೆಳಗ್ಗೆ / ಬೆಳ್ಳಗೆ)
2. ವಾರಕ್ಕೊಮ್ಮೆ ............. ಗಳನ್ನು ಕತ್ತರಿಸಬೇಕು. (ವುಗುರು / ಉಗುರು)
3. ಬೆಳಗ್ಗೆ ಮತ್ತು ರಾತ್ರೆ ................ ಗಳನ್ನು ಉಜ್ಜಬೇಕು. ( ಹಲ್ಲು / ಅಲ್ಲು )
4. ಪ್ರತಿದಿನ ಮನೆ ಮತ್ತು ಪರಿಸರವನ್ನು ಗುಡಿಸಿ ........... ಯಾಗಿ ಇಟ್ಟುಕೊಳ್ಳಬೇಕು. ( ಶುಚಿ / ಸುಚಿ )
5. ಮನೆಯ ಪರಿಸರದಲ್ಲಿ ಕೊಳಕು ನೀರು ನಿಲ್ಲದಂತೆ ................. ವಹಿಸಬೇಕು. ( ಹೆಚ್ಚರ / ಎಚ್ಚರ )
6. ಪ್ರತಿದಿನ ಶುಭ್ರವಾದ ಬಟ್ಟೆಬರೆಗಳನ್ನು ................ ( ಧರಿಸಬೇಕು / ದರಿಸಬೇಕು )
7. ನಮ್ಮ ತರಗತಿಯು ಶುಚಿಯಾಗಿರುವಂತೆ ಗಮನ .......................... ( ಹರಿಸಬೇಕು / ಅರಿಸಬೇಕು )
8. ಉತ್ತಮ ................... ಓದಬೇಕು. ( ಪುತ್ಸಕ / ಪುಸ್ತಕ )
9. ಪ್ರತಿದಿನ ನಾವು ............. ವಿರುವ ಆಹಾರವಸ್ತುಗಳನ್ನು ಸೇವಿಸಬೇಕು. ( ಪೋಷಕಾಂಶ / ಪೋಶಕಾಂಷ )
10. ಪ್ರತಿದಿನ ಸ್ವಲ್ಪಹೊತ್ತು ಶಾರೀರಿಕ .......... ಅಥವಾ ಆಟಗಳಲ್ಲಿ ತೊಡಗಬೇಕು. ( ವಾಯ್ಯಾಮ / ವ್ಯಾಯಾಮ )

(ಗುಂಪಿನಲ್ಲಿಯೂ ತರಗತಿ ಮಟ್ಟದಲ್ಲಿಯೂ ಸರಿಪಡಿಸಿ ಬರೆದ ವಾಕ್ಯಗಳನ್ನು ಪದಸೂರ್ಯದ ಆಧಾರದಲ್ಲಿ ವರ್ಗೀಕರಿಸಿ ಬರೆಯಲು ಗುಂಪು ಚಟುವಟಿಕೆ ನೀಡುವುದು.)

ಎಲ್ಲಾ ವಿದ್ಯಾರ್ಥಿಗಳು ನಿಮ್ಮದೇ ಆದ ರೀತಿಯಲ್ಲಿ ಒಂದು ವಿವರಣೆಯನ್ನು ವೈಯಕ್ತಿಕವಾಗಿ ಬರೆಯಿರಿ.

1. ವೈಯಕ್ತಿಕ ಶುಚಿತ್ವ

2. ಮನೆ ಮತ್ತು ಪರಿಸರ

3. ವಿದ್ಯಾಲಯ ಮತ್ತು ಪರಿಸರ

**ಚಟುವಟಿಕೆ 3 – ವ್ಯಕ್ತಿ ಪರಿಚಯ**

---

1. ಇವರು ಕೊಯಪಳ್ಳಿ ಕೇಳಪ್ಪನ್. ಕೆ.ಕೇಳಪ್ಪನ್ ಎಂದೇ ಪರಿಚಿತರು. ಇವರು 24 ಅಗೋಸ್ತು 1889 ರಂದು ಜನಿಸಿದರು.

ಇವರ ತಂದೆಯ ಹೆಸರು ಕಣರನ್ ನಾಯರ್ ಮತ್ತು ತಾಯಿಯ ಹೆಸರು ಕುಂಜಮ್ಮ ಅಮ್ಮ.

ಇವರು ಕಲ್ಲಿಕೋಟೆಯಲ್ಲಿಯೂ ನಂತರ ಮದ್ರಾಸಿನಲ್ಲಿಯೂ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಮುಂದೆ ಅವರು ಚೆಂಗನಶ್ಶೇರಿ ಬೆರ್ಚ್ ಮನ್ಸ್ ಹೈಸ್ಕೂಲ್ ನಲ್ಲಿ ಅಧ್ಯಾಪನ ವೃತ್ತಿಯನ್ನು ಆರಂಭಿಸಿದರು. ಬಳಿಕ ನಾಯರ್ ಸರ್ವೀಸ್ ಸೊಸೈಟಿಯ ಸ್ಥಾಪಕ ಅಧ್ಯಕ್ಷರಾದರು.

ಅನಂತರದಲ್ಲಿ ಅವರು ವೈಕ್ಕಂ ಸತ್ಯಾಗ್ರಹದಿಂದ ಪ್ರಭಾವಿತರಾಗಿ, ಗುರುವಾಯೂರು ಸತ್ಯಾಗ್ರಹ, ದೇವಾಲಯ ಪ್ರವೇಶ ಚಳುವಳಿ ಮೊದಲಾದ ಹೋರಾಟಗಳಲ್ಲಿ ತೊಡಗಿಕೊಂಡರು. ಆ ಮೂಲಕ ಅವರು ಕೇರಳ ಗಾಂಧಿ ಎಂದು ಕರೆಯಲ್ಪಟ್ಟರು. ಸ್ವಾತಂತ್ರ್ಯಾನಂತರದಲ್ಲಿ ಲೋಕಸಭಾ ಸದಸ್ಯರಾಗಿಯೂ, ರಾಜ್ಯ ರಾಜಕಾರಣದಲ್ಲೂ ಗುರುತಿಸಿಕೊಂಡರು. ಪತ್ರಿಕಾರಂಗದಲ್ಲೂ ತಮ್ಮದೇ ಆದ ಕೊಡುಗೆಯನ್ನು ನೀಡಿದರು.

ಕೆ. ಕೇಳಪ್ಪನ್ ಅವರ ಗೌರವಾರ್ಥ ಭಾರತೀಯ ಅಂಚೆ ಇಲಾಖೆಯು 1990 ರಲ್ಲಿ ಇವರ ಭಾವಚಿತ್ರವಿರುವ ಅಂಚೆ ಚೀಟಿಯನ್ನು ಹೊರತಂದಿತು. ಅವರು 7 ಅಕ್ಟೋಬರ್ 1971 ರಂದು ತಮ್ಮ 82 ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು.

---

ಈ ವ್ಯಕ್ತಿ ಪರಿಚಯವನ್ನು ತರಗತಿಯಲ್ಲಿ ಪ್ರದರ್ಶಿಸುವುದು. ವಿವರಣೆಯ ಬಗ್ಗೆ ತರಗತಿ ಮಟ್ಟದಲ್ಲಿ ಸರಳ ಚರ್ಚೆಯನ್ನು ನಡೆಸಿರಿ.

- ಇದು ಏನು?
- ಎಷ್ಟು ಪಾರಾಗಳಿವೆ?
- ಪ್ರತಿಯೊಂದು ಪಾರಾಗಳಲ್ಲಿ ಯಾವ ಯಾವ ವಿಚಾರಗಳನ್ನು ನೀಡಿದ್ದಾರೆ? ಒಂದೇ ವಿಚಾರವೇ? ಅವುಗಳನ್ನು ಹೇಗೆ ಕ್ರಮೀಕರಿಸಲಾಗಿದೆ?
- ಒಟ್ಟಾಗಿ ಇಲ್ಲಿ ಯಾವೆಲ್ಲ ವಿಚಾರಗಳನ್ನು ದಾಖಲಿಸಿದ್ದಾರೆ?

ಹಾಗಾದರೆ ವ್ಯಕ್ತಿ ಪರಿಚಯ ಅಂದರೆ ಒಬ್ಬ ವ್ಯಕ್ತಿಯ ಹುಟ್ಟಿನಿಂದ ಮರಣದವರೆಗಿನ ಕೌಟುಂಬಿಕ, ಶೈಕ್ಷಣಿಕ, ಸಾಮಾಜಿಕ, ವೃತ್ತಿರಂಗ, ಸಾಧನೆ, ಸೇವೆ ಇತ್ಯಾದಿಗಳನ್ನು ಬರಹರೂಪದಲ್ಲಿ ಚುಟುಕಾಗಿ ಮಂಡಿಸುವುದಾಗಿದೆ.

(ಅಧ್ಯಾಪಕರು ಯಾರಾದರೊಬ್ಬರ ವ್ಯಕ್ತಿ ಪರಿಚಯಕ್ಕಿರುವ ಕೆಲವು ಸೂಚನೆಗಳನ್ನು ಪದಸೂರ್ಯದ ರೂಪದಲ್ಲೋ ಅಥವಾ ತಮ್ಮದೇ ಆದ ಆಕರ್ಷಕ ರೀತಿಯಲ್ಲೋ ವಿದ್ಯಾರ್ಥಿಗಳ ಮುಂದೆ ಮಂಡಿಸುವುದು.)
ಇವುಗಳನ್ನು ಆಧಾರವಾಗಿಟ್ಟುಕೊಂಡು ವಿದ್ಯಾರ್ಥಿಗಳು ವೈಯಕ್ತಿಕವಾಗಿ ವ್ಯಕ್ತಿ ಪರಿಚಯವನ್ನು ಬರೆಯಿರಿ. ಗುಂಪುಗಳಲ್ಲಿ ಪರಸ್ಪರ ಓದಿ ಮಂಡಿಸಿ ತಪ್ಪುಗಳನ್ನು ಸರಿಪಡಿಸಿರಿ. ತರಗತಿ ಮಟ್ಟದಲ್ಲಿ ಪ್ರತಿಯೊಂದು ಪಾರಾಗಳನ್ನು ಚರ್ಚೆಯ ಮೂಲಕ ವಾಕ್ಯಗಳನ್ನು ರೂಪಿಸುತ್ತಾ ಮಾದರಿಯನ್ನು ಬರೆದು ಪ್ರದರ್ಶಿಸಿರಿ. ಅವುಗಳನ್ನು ಒಟ್ಟು ಸೇರಿಸಿ ವ್ಯಕ್ತಿ ಪರಿಚಯ ಸಂಚಿಕೆ ತಯಾರಿಸಿರಿ.


## ಕೆ. ಕೇಳಪ್ಪನ್ ಅವರ ವ್ಯಕ್ತಿ ಪರಿಚಯ

**ಚಟುವಟಿಕೆ 4 – ಸಂಭಾಷಣೆ**

ಉದ್ದೇಶ – ಸಂಭಾಷಣೆಯನ್ನು ರೂಪೀಕರಿಸುವುದು.

(ವಿದ್ಯಾರ್ಥಿಗಳಿಗೆ ಸಂಭಾಷಣೆಯ ಕುರಿತು ತಿಳುವಳಿಕೆ ಸಿಗುವ ರೀತಿಯಲ್ಲಿರುವ ಸರಳ ಚರ್ಚೆ ನಡೆಸುವುದು.)

- ಸಂಭಾಷಣೆ ಎಂದರೇನು?
- ಕೆಲವು ಉದಾಹರಣೆಗಳನ್ನು ಮಂಡಿಸಲು ಹೇಳುವುದು.
- ತರಗತಿಯಲ್ಲಿ ಈಗ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವೆ ನಡೆಯುತ್ತಿರುವುದೇನು?
- ಒಂದು ಸಂಭಾಷಣೆ ನಡೆಸಲು ಕನಿಷ್ಟ ಎಷ್ಟು ಕಥಾಪಾತ್ರಗಳು ಬೇಕು? ಅದಕ್ಕಿಂತ ಹೆಚ್ಚಿರಬಾರದೇ?
- ಸಂಭಾಷಣೆಗೆ ಯಾವುದಾದರೊಂದು ವಿಷಯದ ಅಗತ್ಯವಿದೆಯೇ?




(ಅಧ್ಯಾಪಕರು ಒಂದು ಸಂದರ್ಭವನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು.)

ಒಂದು ಕಾಡು. ಕಾಡಿನಿಂದ ರಾಮು ಓಡೋಡಿ ಬರುತ್ತಿದ್ದಾನೆ. ಎದುರಿಗೆ ಆತನ ಗೆಳೆಯ ಅರುಣ್ ಕಾಣಸಿಕ್ಕಿದ. ಹೆದರಿಕೆಯಿಂದ ಬೆವರಿದ್ದ ರಾಮುವನ್ನು ಕಂಡು ಅರುಣ್ ಆಶ್ಚರ್ಯದಿಂದ ವಿಚಾರಿಸಿದನು.

ಅವರೊಳಗೆ ನಡೆದ ಸಂಭಾಷಣೆಯನ್ನು ಊಹಿಸಿ ಬಾಯ್ದೆರೆಯಾಗಿ ಹೇಳಿರಿ.

ಒಂದೊಂದು ವಾಕ್ಯವನ್ನು ಹೇಳುವಾಗಲೂ ಅವುಗಳನ್ನು ತಮ್ಮ ತಮ್ಮ ನೋಟುಪುಸ್ತಕದಲ್ಲಿ ಬರೆಯುವುದು.

ಮೇಲಿನ ಪದಸೂರ್ಯದ ಆಧಾರದಲ್ಲಿ ಪ್ರತಿಯೊಂದು ಸಂಭಾಷಣಾ ವಾಕ್ಯವನ್ನು ಮೌಲ್ಯಮಾಪನ ಮಾಡುವುದು.

ಬಳಿಕ ಅವುಗಳನ್ನು ತರಗತಿ ಮಟ್ಟದಲ್ಲಿ ಘಟನೆಗಳನ್ನು ಕ್ರಮೀಕರಿಸಿ ಉತ್ತಮಪಡಿಸಿ ಬರೆಯುವುದು.

**ಚಟುವಟಿಕೆ 5 – ಪದ್ಯಕ್ಕೆ ಸಾಲು ಸೇರಿಸುವುದು**

ಮಳೆ ನಿಮಗೆ ಇಷ್ಟವಲ್ಲವೇ? ಮಳೆಗಾಲದಲ್ಲಿ ನೀವು ನೀರಿನಲ್ಲಿ ಆಡುತ್ತೀರಿ.. ಖುಷಿ ಪಡುತ್ತೀರಿ.. ಮಳೆಯ ಹಾಡನ್ನೂ ಹಾಡಿರಬಹುದಲ್ಲವೇ? ನಿಮಗೆ ಒಂದು ಪದ್ಯವನ್ನು ರಚಿಸಲು ಸಾಧ್ಯವೇ? ಪದ್ಯ ರಚಿಸುವಾಗ ಗಮನಿಸಬೇಕಾದ ವಿಚಾರಗಳೇನು?

- ವಸ್ತುವನ್ನು ತೀರ್ಮಾನಿಸಬೇಕು. (ಮಳೆ)
- ಮಳೆಯ ಸಮಯ
- ಮಳೆಯ ರೀತಿ, ಜಡಿಮಳೆ, ....
- ಮಳೆಯ ಪ್ರಯೋಜನಗಳು..
- ಮಳೆಯ ಸಂದರ್ಭದಲ್ಲಿ ಉಂಟಾಗುವ ಬದಲಾವಣೆಗಳು.
- ಮಳೆ ಎಲ್ಲಿಂದ ಬರುತ್ತದೆ?
- ಮಳೆ ಬರುವಾಗ ಜನರ ಪ್ರತಿಕ್ರಿಯೆಗಳು

.......................................................................

ಪದ್ಯ ರಚನೆಯ ಮೊದಲು ಈ ವಿಚಾರಗಳ ಕುರಿತು ಚರ್ಚೆ ನಡೆಸಿರಿ.

ತಂಗಾಳಿ ಬೀಸುತ್ತದೆ. ನಾಟಿ ಆರಂಭಿಸುತ್ತಾರೆ. ಹೊಲ ಉಳುತ್ತಾರೆ.
ಓ.. ಹೋ.. ಸ್ವರ ಕೇಳುತ್ತದೆ. ಆಕಾಶದಲ್ಲಿ ಮೋಡ ಮುಸುಕುತ್ತದೆ.
ಗಾಳಿ ಬೀಸುತ್ತದೆ. ನೀರಾಟ ಆಡುತ್ತಾರೆ. ಮಳೆಗಾಲ ಆರಂಭ.
ಬಾವಿ ಕೆರೆ ತುಂಬುತ್ತದೆ. ಮಳೆ ಗುಡ್ಡ ಕಾಡನು ಮುಚ್ಚುತ್ತದೆ.
ತೋಡು ಹೊಳೆ ತುಂಬಿ ಹರಿಯುತ್ತದೆ. ಮಳೆ ಮುನಿಯುತ್ತದೆ.
ನೆರೆ ಪ್ರವಾಹ ಉಂಟಾಗುತ್ತದೆ. ಬೀಜ ಹಾಕುತ್ತಾರೆ.

ಮೇಲಿನ ಸೂಚನೆಗಳ ಆಧಾರದಲ್ಲಿ ಪದ್ಯ ಮುಂದುವರಿಸಿ ಬರೆಯಿರಿ.


ದಟ್ಟನೆ ಮೋಡ
ಬಾನಲಿ ನೋಡ
ಬೆಟ್ಟವ ಗುಡ್ಡವ
ಮುಸುಕಿದೆ ನೋಡ

ಮೋಡ ಮುಸುಕೆ ಬಾನಲಿ
ಗಾಳಿ ಬೀಸೆ ಬುವಿಯಲಿ
ಗುಡುಗು ಗುಡುಗಿ ಸದ್ದು ಮಾಡಿ
ಮಳೆಯು ಸುರಿಯಿತಿಳೆಯಲಿ

**ಚಟುವಟಿಕೆ 6 – ಪ್ರಶ್ನೆ ತಯಾರಿ**


ನಮಗೆ ಒಬ್ಬ ವ್ಯಕ್ತಿಯ ಅಥವಾ ವಸ್ತುವಿನ ಕುರಿತು ತಿಳಿಯಬೇಕಾದರೆ ನಾವೇನು ಮಾಡುತ್ತೇವೆ? ಕೆಲವೊಂದು ವಿಚಾರಗಳನ್ನು ಅವನಿಂದ ಅಥವಾ ವಸ್ತುವಿನ ಬಗ್ಗೆ ಕೇಳಿ ತಿಳಿಯಬೇಕಾಗಿದೆ. ಪ್ರಶ್ನೆಗಳ ಮೂಲಕ ಹಲವು ವಿಷಯಗಳನ್ನು ಕೇಳಿ ತಿಳಿಯುತ್ತೇವೆ. ಪ್ರಶ್ನೆ ಕೇಳುವಾಗಲೂ ಹಲವು ಪ್ರಶ್ನಾರ್ಥಕ ಪದಗಳನ್ನು ಬಳಸುತ್ತೇವೆ. ಪ್ರಶ್ನಾ ಚಿಹ್ನೆಗಳನ್ನು ಬಳಸುತ್ತೇವೆ.

ಪ್ರಶ್ನಾರ್ಥಕ ಪದಗಳ ಮೂಲಕ ಪದಸೂರ್ಯವನ್ನು ಪೂರ್ತಿಗೊಳಿಸೋಣವೇ?



ಪದಸೂರ್ಯ ರಚಿಸಿಯಾಯಿತಲ್ಲವೇ?

ಇನ್ನು ಕೆಳಗೆ ಒಬ್ಬ ರಾಜ ಕುಳಿತಿದ್ದಾನೆ. ನಿಮಗೆ ಅವನ ಬಗ್ಗೆ ಹಲವು ವಿಚಾರ ತಿಳಿಯಬೇಕಾಗುತ್ತದೆ. ಮೇಲಿನ ಪದಸೂರ್ಯದ ಸಹಾಯದಿಂದ ರಾಜನೊಡನೆ ಬಾಯ್ದೆರೆಯಾಗಿ ಪ್ರಶ್ನೆ ಕೇಳಿರಿ.



ಕೇಳಿದ ಪ್ರಶ್ನೆಗಳನ್ನು ನಿಮ್ಮ ನೋಟುಪುಸ್ತಕದಲ್ಲಿ ಬರೆಯಿರಿ.

**ಚಟುವಟಿಕೆ 7 - ಲೇಖನ ಚಿಹ್ನೆಗಳು**

ಬರವಣಿಗೆಯಲ್ಲಿ ಲೇಖನ ಚಿಹ್ನೆಗಳ ಉಪಯೋಗ ಬಹಳ ಪ್ರಧಾನವಾಗಿದೆ. ಅವುಗಳು ವಾಕ್ಯಗಳ ಅರ್ಥವತ್ತಾದ ಆಶಯವನ್ನು ತಿಳಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಉತ್ತಮ ಬರವಣಿಗೆಗೂ ಅಗತ್ಯವಾಗಿವೆ. ಪೂರ್ಣವಿರಾಮ(.), ಅಲ್ಪವಿರಾಮ(,), ಆಶ್ಚರ್ಯಸೂಚಕ(!), ಪ್ರಶ್ನಾರ್ಥಕ ಚಿಹ್ನೆ(?), ಉದ್ಧರಣ ಚಿಹ್ನೆ(“ ”) ಇತ್ಯಾದಿಗಳು ಬಹಳ ಪ್ರಧಾನವಾದುದಾಗಿದೆ. ಬಾಯ್ದೆರೆಯಾಗಿ ಒಂದು ವಾಕ್ಯವನ್ನು ಹೇಳುವ ಸಂದರ್ಭದಲ್ಲೂ ಇದು ಪ್ರತಿಫಲಿಸುತ್ತದೆ.

ಈ ಕೆಳಗೆ ನೀಡಲಾದ ವಾಕ್ಯಗಳನ್ನು ಬಾಯ್ದೆರೆಯಾಗಿ ಹೇಳಿ ನೋಡಿರಿ.

- ಅಬ್ಬಾ ಎಷ್ಟು ವೇಗವಾಗಿ ಅವನು ಓಡುತ್ತಿದ್ದಾನೆ
- ನಿಲ್ಲಿರಿ ನೀವು ಯಾವ ಕಡೆಗೆ ಹೋಗುತ್ತೀರಿ
- ಮರವನ್ನೇರುವುದು ಕಷ್ಟ ರಾಮನು ಹೇಳಿದನು

ಈ ವಾಕ್ಯಗಳನ್ನು ಎಲ್ಲರೂ ಬಾಯ್ದೆರೆಯಾಗಿ ಹೇಳಿರಿ. ವಾಕ್ಯಗಳನ್ನು ಬಾಯ್ದೆರೆಯಾಗಿ ಹೇಳುವಾಗ ಗಮನಿಸಬೇಕಾದ ವಿಚಾರಗಳೇನು? ಚರ್ಚೆ.

- ಸ್ವರಭಾರ
- ಏರಿಳಿತ
- ಉಚ್ಚಾರ ಸ್ಪಷ್ಟತೆ
- ಆಶ್ಚರ್ಯಸೂಚಕ
- ಭಾವಸೂಚಕ

ಬರವಣಿಗೆಯಲ್ಲಿ ಆಶಯಗಳ ಸ್ಪಷ್ಟತೆಗಾಗಿ ನಾವು ಲೇಖನ ಚಿಹ್ನೆಗಳನ್ನು ಬಳಸುತ್ತೇವೆ.

**ಉದಾಹರಣೆ**

ಅಬ್ಬಾ! ಅವನು ಎಷ್ಟು ವೇಗವಾಗಿ ಓಡುತ್ತಿದ್ದಾನೆ.
ನಿಲ್ಲಿರಿ! ನೀವು ಯಾವ ಕಡೆಗೆ ಹೋಗುತ್ತೀರಿ?
‘ಮರವೇರುವುದು ಕಷ್ಟ’ ರಾಮನು ಹೇಳಿದನು.
ಇದೇ ರೀತಿ ಈ ಕೆಳಗೆ ನೀಡಲಾದ ವಾಕ್ಯಗಳನ್ನು ಬಾಯ್ದೆರೆಯಾಗಿ ಹೇಳಿ ಲೇಖನ ಚಿಹ್ನೆಗಳನ್ನು ಬಳಸಿರಿ.

1. ಅಯ್ಯೋ ಮರ ಮುರಿದು ಬೀಳುತ್ತಿದೆ
2. ಜಾಗ್ರತೆ ಮುಂದೆ ದೊಡ್ಡ ಹೊಂಡವಿದೆ
3. ಮನಸ್ಸಿದ್ದರೆ ಮಾರ್ಗವಿದೆ ಇದೊಂದು ಗಾದೆಮಾತಾಗಿದೆ
4. ಮಳೆ ಬಂದರೆ ಬರಲಿ ನಾವು ಜಾಗರೂಕರಾಗಿರೋಣ
5. ಕಾಗದ ಬಂದಿದೆ ಅಂಚೆಯವನು ಕೂಗಿ ಹೇಳಿದನು
6. ಡಬ್ಬಿಯಲ್ಲಿದ್ದ ತಿಂಡಿ ತಿಂದವನು ಯಾರು
7. ಬೆಕ್ಕಿಗೆ ಗಂಟೆ ಕಟ್ಟುವವರು ಯಾರು

**ಚಟುವಟಿಕೆ 8 – ಪದ ಬದಲಿಸಿ ಹೇಳುವ**

(ಅಧ್ಯಾಪಕರು ಒಂದು ವಾಕ್ಯವನ್ನು ಬಾಯ್ದೆರೆಯಾಗಿ ಹೇಳುವುದು. ಸೂಚಿಸಿದ ಪದವನ್ನು ಬದಲಾಯಿಸಿ ಮಕ್ಕಳು ವಾಕ್ಯವನ್ನು ಹೇಳುವುದು.)

ಉದಾಹರಣೆ : ಅವನು ಹಾಲು ತಂದನು.

ಅವನು ಎಂಬ ಪದದ ಬದಲು ಅವಳು ಎಂಬ ಪದವನ್ನು ಸೇರಿಸಿ ವಾಕ್ಯ ಮುಂದುವರಿಸಿರಿ.

(ಮಕ್ಕಳು ವಾಕ್ಯಗಳನ್ನು ಹೇಳುವ ಸಂದರ್ಭದಲ್ಲಿ ಒಂದೆರಡು ಬಾರಿ ತಪ್ಪಿದ ಭಾಗವನ್ನು ತಿದ್ದಿ ಹೇಳಲು ಅವಕಾಶ ನೀಡುವುದು.)

ಕೋಣೆಯಲ್ಲಿರುವ ಪದಗಳನ್ನು ಆಯ್ದು ವಾಕ್ಯ ಬದಲಾಯಿಸಿ ಬರೆಯಿರಿ.

ಜಲಜ ಗೆಳೆಯರ ಜೊತೆ ಓದಿದಳು.

ವಿನು ಮಗನಿಗೆ ಹಣ ನೀಡಿದನು.

ಅವನು ಚೆನ್ನಾಗಿ ಆಡುತ್ತಾನೆ.

| |
|---|
| ಅವಳು |
| ಮಗಳಿಗೆ |
| ಗೆಳತಿಯರ |
| ಹುಡುಗಿಯರು |

ಇದೇ ರೀತಿ ನೀವು ಸ್ವಂತವಾಗಿ ಎರಡು ವಾಕ್ಯ ರಚಿಸಿರಿ.

..............................................................................

..............................................................................

ಇಂತಹ ವಾಕ್ಯಗಳನ್ನು ಮಾದರಿಯಂತೆ ಬದಲಾಯಿಸಿ ಗಟ್ಟಿಯಾಗಿ ಹಲವು ಸಲ ಬಾಯ್ದೆರೆಯಾಗಿ ಹೇಳಿರಿ.

ಅನಂತರ ಒಂದೊಂದೇ ವಾಕ್ಯವನ್ನು ಬರೆಯಿರಿ.

**ಚಟುವಟಿಕೆ 9 – ನೋಡಿ ಬರೆಯೋಣ**

**ಕ, ಕಾ, ಕೊ, ಕೋ**

ಈ ಅಕ್ಷರಗಳಲ್ಲಿರುವ ವ್ಯತ್ಯಾಸಗಳ ಚರ್ಚೆ ನಡೆಸಿರಿ. ಬಾಯ್ದೆರೆಯಾಗಿ ಹೇಳಿರಿ.

ಪ್ರತಿಯೊಂದು ಅಕ್ಷರದ ವಿವಿಧ ಪದಗಳನ್ನು ಬರೆಯಿರಿ.

ಕದ, ಕಸ, ಕನ್ನಡ, ಕರ
ಕಾಗೆ, ಕಾಕ, ಕಾರು, ಕಾಡು
ಕೊಡಲಿ, ಕೊಡು, ಕೊರಗು, ಕೊರಡು
ಕೋಗಿಲೆ, ಕೋವಿಡ್, ಕೋಣ, ಕೋಪ

**ಚಟುವಟಿಕೆ 10 – ಒತ್ತಕ್ಷರಗಳು ಯಾವುವು?**

| | | |
|---|---|---|
| ಅಕ್ಕಸಾಲಿಗ | ್ಕ | ಕ |
| ಕಮ್ಮಾರ | ್ಮ | ಮ |
| ರೈತ | ೖ | ಐ |
| ವರ್ತಕ | ರ್ | ರ |

**ಚಟುವಟಿಕೆ 11 – ಗೆರೆ ಎಳೆದು ಜೋಡಿಸಿರಿ.**

| | |
|---|---|
| ರ | ೖ |
| ಕ | ್ಮ |
| ಐ | ರ್‍ |
| ಮ | ್ಕ |

**ಚಟುವಟಿಕೆ 12 – ಅಡಗಿರುವವರು ಯಾರು?**

| | |
|---|---|
| ಕ್ಕ | ಕ್ + ಕ್ + ಅ |
| ಮ್ಮಾ | ಮ್ + ಮ್ + ಆ |
| ರೈ | ರ್ + ಅ + ಐ |
| ರ್ತ | ರ್ + ತ್ + ಅ |

ಸಜಾತೀಯ ಒತ್ತಕ್ಷರಗಳು ಬರುವ ಪದಗಳನ್ನು ಕಂಡುಹಿಡಿಯಿರಿ.

ಉದಾ – ಅಜ್ಜ, ಹುಚ್ಚ, ಹಗ್ಗ, ಅಕ್ಕ

.......................................................................................................

.......................................................................................................

.......................................................................................................

.......................................................................................................

**ಚಟುವಟಿಕೆ 13 – ವರ್ಣನೆ**

ಹೂವಿನ ಚಿತ್ರವನ್ನು ನೋಡಿದಿರಲ್ಲವೇ? ಇದರ ಕುರಿತು ಕೆಲವು ವಾಕ್ಯಗಳನ್ನು ಹೇಳಿರಿ.

(ಬಾಯ್ದೆರೆ ಮಂಡನೆಯ ಅಧ್ಯಾಪಕರು ಚಿತ್ರಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.)

- ಇದು ಏನು?
- ಇದರ ಬಣ್ಣ ಯಾವುದು?
- ಹೂವು ಹೇಗಿದೆ?
- ಎಷ್ಟು ಹೂಗಳಿವೆ?
- ಅವುಗಳಿಗೆ ಎಷ್ಟು ದಳಗಳಿವೆ?



**14. ಹೂವಿನ ಕುರಿತಾಗಿ ಕೆಳಗೆ ನೀಡಲಾದ ಸರಳ ವಾಕ್ಯಗಳನ್ನು ಓದಿರಿ.**

| |
|---|
| ಹೂ |
| ಬಣ್ಣದ ಹೂ |
| ಚಂದವಾದ ಬಣ್ಣದ ಹೂ |
| ಹಳದಿ ಬಣ್ಣದ ಚಂದವಾದ ಹೂ |
| ಹಲವು ದಳಗಳ ಹಳದಿ ಬಣ್ಣದ ಚಂದವಾದ ಹೂ |

**15. ಚಿತ್ರ ನೋಡಿ ಇದೇ ರೀತಿಯಲ್ಲಿ ವಾಕ್ಯಗಳನ್ನು ಬರೆಯಿರಿ.**

